Feb 2011 VOL 2 ISSUE 2

# ॥ ಮಾಹಿತಿ ॥

ತಾಯಿತಂದೆ ಹಾಗು ಶಿಕ್ಷಕರಿಗಾಗಿ ಒಂದು ಸುದ್ದಿಪತ್ರ

## ಸಂಪಾದಕರಿಂದ

ಪ್ರಿಯ ಓದುಗರೇ,
ಹಿಂದಿನ ಸಂಚಿಕೆ ನಿಮಗೆ ಸಂತೋಷದಾಯಕವಾಗಿತ್ತು ಹಾಗೂ ಉಪಯೋಗಿಯಾಗಿತ್ತೆಂದು ಆಶಿಸುತ್ತೇನೆ. ಈ ಸಂಚಿಕೆಯಿಂದ ನಮ್ಮ ಸುದ್ದಿ ಪತ್ರಕ್ಕೆ ಒಂದು ಹೊಸ ರೂಪ ಬಂದಿದೆ. ನನ್ನ ಹಾಗೇ ನಿಮಗೂ ಸಹ ಇದು ಬಹಳ ಇಷ್ಟವಾಗುವುದೆಂದು ನಂಬಿದ್ದೇನೆ.

ಈ ಸಂಚಿಕೆಯಲ್ಲಿ ಶೈಕ್ಷಣಿಕ ವಿಷಯಕ್ಕೆ ಸಂಭಂದಿಸಿದಂತ ಒಂದು ಮಹತ್ತರವಾದ ಭಾಗ–' ಓದುವುದು' ರ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ. ಓದುವುದು ಶಿಕ್ಷಣದ ಮುಖ್ಯ ಭಾಗವಾಗಿ ಸ್ಪಷ್ಟವಾಗುವುದು ಪ್ರಾಥಮಿಕ ಶಾಲೆಯಲ್ಲಾದರೂ ಅದರ ಬೇರೂರುವುದು ಮಕ್ಕಳು ಶಾಲೆಗೇ ಹೋಗುವುದಕ್ಕೂ ಮುಂಚಿನ ವರ್ಷಗಳಲ್ಲೆಂಬುವುದು ನಮಗೆಲ್ಲಾ ಗೊತ್ತು. ಶಾಲೆಯಲ್ಲಿ, ಅದರಲ್ಲೂ, ದೊಡ್ಡ ತರಗತಿಗಳಲ್ಲಿ ಯಶಸ್ವಿಯಾಗಲು ಓದುವುದು ಬಹಳ ಮುಖ್ಯ ಎಂಬುದನ್ನು ನಾವೆಲ್ಲಾ ತಿಳಿದಿದ್ದೇವೆ. ಆದರೆ, ಒಬ್ಬ ಯಶಸ್ವಿ ಓದುಗನ ಗುರುತೆನು ?, ಯಾವುದರಿಂದ ಮಕ್ಕಳು ಓದಿದ್ದನ್ನು ಅರ್ಥಮಾಡಿಕೊಂಡು ಖುಷಿಪಡುತ್ತಾರೆ?, ಹಾಗೂ, ನಾವು–ಅವರ ತಾಯಿ, ತಂದೆ, ಮತ್ತು ಶಿಕ್ಷಕರು, ಮಕ್ಕಳು ಕಷ್ಟವಿಲ್ಲದೆ ಸಂತೋಷದಿಂದ ಓದುವ ಹಾಗೆ ಹೇಗೆ ಮಾಡಬಹುದು?. ಈ ಸಂಚಿಕೆಯಲ್ಲಿ ಓದುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ಬಗ್ಗೆ ಮತ್ತು ಮಕ್ಕಳು ಬಾಲ್ಯದಲ್ಲಿಯೇ ಸರಿಯಾಗಿ ಹಾಗೂ ಸುಲಭವಾಗಿ ಓದಲು ಸಹಾಯಮಾಡುವಂತಹ ಯುಕ್ತಿ/ಉಪಾಯಗಳ ಬಗ್ಗೆ ತಿಳಿಯೋಣ.

**ಗಾಯತ್ರಿ ಕಿರಣ್**




### ಈ ಸಂಚಿಕೆಯಲ್ಲಿ

## ಓದುವುದು

Samyukta
CHILD DEVELOPMENT CONSULTANCY

# ಓದುವುದು



## ಓದುವುದರ ಮುಖ್ಯ ಮೈಲಿಗಲ್ಲುಗಳು

ಬರೆದಿರುವುದನ್ನು ಅರ್ಥಮಾಡಿಕೊಳ್ಳುವುದೇ ಓದುವುದು. ಇದರಲ್ಲಿ ಎರಡು ಭಾಗಗಳಿವೆ– ಪದಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳುವುದು. ನಾವು ಯಾವುದನ್ನಾದರೂ ಓದುವ ಸಾಮರ್ಥ್ಯತೆ ಪಡೆಯುವ ಮೊದಲು, ಅದರ ಹಿನ್ನೆಲೆಯಲ್ಲಿ ಬಹಳಷ್ಟು ತಯಾರಿ ನಡೆಸಿರಬೇಕು – ಅಂದರೆ, ಓದಲು ಹೊರಟಿರುವ ವಿಷಯದ ಬಗ್ಗೆ ತಿಳುವಳಿಕೆ, ವಿಶಾಲವಾದ ಪದ ಸಂಪತ್ತು, ವ್ಯಾಕರಣದ ಸರಿಯಾದ ಉಪಯೋಗ ಇವೆಲ್ಲ ಗೊತ್ತಿರಬೇಕು. ಆದ್ದರಿಂದ, ಓದಲು ಸನ್ನದ್ಧರಾಗುವುದಕ್ಕೆ ನಡೆಸುವ ತಯಾರಿಯ ಪರಿಮಾಣ, ನಮ್ಮ ಓದುವ ಕುಶಲತೆಗೆ ನಿರ್ಧಾರಕವಾಗುತ್ತದೆ.

ಮಕ್ಕಳು ಪುಸ್ತಕ ಹಿಡಿಯುವುದಕ್ಕೆ ವಯಸ್ಸಿನ ಮಿತಿ ಇಲ್ಲ, ಹಾಗೂ ದೊಡ್ಡವರು ಎಷ್ಟೇ ಚಿಕ್ಕ ಮಕ್ಕಳಿಗಾದರೂ ಓದಿ ಹೇಳಬಹುದು. ಹಾಗಾಗಿ, ಮಕ್ಕಳು ತಾವಾಗಿಯೇ ಓದುವುದಕ್ಕೆ ತಯಾರಿ ಅವು ಶಿಶುಗಳಾಗಿರುವಾಗಲೇ ಆರಂಭವಾಗಬಹುದು. ಈ ತಯಾರಿಗೆ 'ಓದುವುದು' ಮಕ್ಕಳ ಶಿಶುವಿಹಾರದ ಅಧ್ಯಯನದ ವಿಷಯವಾಗುವವರೆಗೂ ಕಾಯಬೇಕಾಗಿಲ್ಲ.

ಮಗು ತಾನಾಗೆ ಓದುವುದಕ್ಕಿಂತ ಮೊದಲು ಅಥವಾ ಓದಲು ಪ್ರಯತ್ನ ಮಾಡುವ ಮೊದಲೇ ಬಹಳಷ್ಟು ಕಾಲ ಮಗುವಿಗೆ ಓದಿ ಹೇಳಿರಬೇಕು.ಓದಲು ಪ್ರಾರಂಭ ಮಾಡುವ ಮೊದಲು ಅತ್ಯಾವಶ್ಯಕವಾಗಿ ಬೇಕಾದದ್ದು ಏನೆಂದರೆ? ವಿಭಿನ್ನವಾದ ಹಾಗೂ ವಿಶಾಲವಾದ ಪದ ಸಂಪತ್ತು, ಮಾತನಾಡುವ ಭಾಷೆಯ ಮೂಲ ನಿಯಮಗಳನ್ನು ಕಲಿಯುವುದು, ಮುದ್ರಿಸಿರುವ ಅಕ್ಷರ ಅಥವಾ ಚಿತ್ರಗಳಿಗೂ ಅರ್ಥವಿದೆ ಎಂಬ ತಿಳುವಳಿಕೆ ಹಾಗೂ ಪ್ರತಿದಿನ ಮುದ್ರಿಸಿರುವ ಅಕ್ಷರ ಮತ್ತು ಚಿತ್ರಗಳನ್ನು ನೋಡುವುದು.

ರೂಢಿಯಂತೆ ನಿಯಮಿತ ಕಾಲದಲ್ಲಿ ನಿಮ್ಮ ಮಗುವಿನೊಂದಿಗೆ ಓದಿ ಹಾಗೂ ಓದಿ ಹೇಳಿ (ವಾರದಲ್ಲಿ ಐದಾರು ದಿನ). ಮಗುವಿಗೆ ಎಷ್ಟು ಬೇಕೋ ಅಷ್ಟು ಓದಿ ಹೇಳುವುದರಿಂದ ಯಾವ ತೊಂದರೆಯೂ ಇಲ್ಲ. ಇದು ಒಳ್ಳೆಯ ಹವ್ಯಾಸವನ್ನುಂಟು ಮಾಡುವುದಲ್ಲದೆ, ಮಗುವಿನೊಂದಿಗೆ ಒಡಗೂಡಲು ಒಂದು ಒಳ್ಳೆಯ ಅವಕಾಶ ಸಹ.

"ಎಷ್ಟೇ ಚಿಕ್ಕ ಮಗುವಾದರೂ ಸಹ ಪುಸ್ತಕ ಹಿಡಿಯಬಹುದು ಹಾಗೂ ಎಷ್ಟೇ ಚಿಕ್ಕ ಮಗುವಾದರೂ ದೊಡ್ಡವರು ಓದಿ ಹೇಳಬಹುದು..."

samyukta
CHILD DEVELOPMENT CONSULTANCY

Feb 2011 VOL 2 ISSUE 2

# ಓದುವುದರ ಹಂತಗಳು

ಮಕ್ಕಳು ಓದುವುದನ್ನು ಕಲಿಯಲು ನಾಲ್ಕು ಹಂತಗಳಿವೆ.

- ಮೊತ್ತ ಮೊದಲನೆಯ ಹಂತ ಮಗುವಿಗೆ ಮುದ್ರಣ ಹಾಗೂ ಪುಸ್ತಕಗಳ ಪರಿಚಯ ಮಾಡಿಸುವುದು, ದೈನಂದಿಕ ಜೀವನದಲ್ಲಿ ಮುದ್ರಣದ ಸ್ಥಾನವನ್ನು ಅರಿವುಮಾಡಿಸುವುದು, ಹಾಗೂ ಚಾಕಲೇಟಿನ ಮೇಲಿನ ಹೊದಿಕೆಯಿಂದ ಹಿಡಿದು ಕಥೆ ಪುಸ್ತಕಗಳು ಮತ್ತು ವ್ಯಂಗ್ಯ ಚಿತ್ರಗಳವರೆಗೂ (ಕಾರ್ಟೂನ್) ನಮ್ಮ ಸುತ್ತಲು ಎಲ್ಲೆಡೆಯೂ ಮುದ್ರಣ ಇದೆ ಎಂಬುದನ್ನು ತಿಳಿಯುವಂತೆ ಮಾಡುವುದು.ಈ ಹಂತದಲ್ಲಿಯೇ ಮಕ್ಕಳು ಪುಸ್ತಕಗಳನ್ನು ಹಿಡಿದುಕೊಳ್ಳುವ ರೀತಿ ಮತ್ತು ಪುಟ(ಹಾಳೆ)ಗಳನ್ನು ತಿರುಗಿಸುವ ಪರಿಯನ್ನು ಕಲಿಯಬೇಕು. ಮಕ್ಕಳು ಅವರಿಗೆ ಹೇಳಿದ ಕತೆಗಳನ್ನು ಅರ್ಥಮಾಡಿಕೊಳ್ಳುವುದು, ಪ್ರಶ್ನೆಗಳನ್ನು ಕೇಳಿ ಮತ್ತು ಕತೆಗಳ ಬಗ್ಗೆ ಅಭಿಪ್ರಾಯವನ್ನು ಸೂಚಿಸುವ ಮೂಲಕ ಅರ್ಥಮಾದಿಕೊಂದಿನ್ನು ತೋರಿಸುವುದೂ ಸಹ ಈ ಹಂತದ ಒಂದು ಮುಖ್ಯ ಭಾಗ.

- ಎರಡನೆಯ ಹಂತ ಮಕ್ಕಳು ಅಕ್ಷರಗಳ ಬಾಯಿಪಾಠ ಮಾಡುವುದು, ಅಕ್ಷರಗಳ ಆಕಾರಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ಅಕ್ಷರಗಳಿಂದ ಹೊರಡುವ ಧ್ವನಿಗಳನ್ನು ಅವುಗಳ ಆಕಾರದೊಂದಿಗೆ ಹೊಂದಿಸುವುದನ್ನು ಕಲಿಯುವುದು.

- ಮೂರನೆಯ ಹಂತ ಮಕ್ಕಳು ಅಕ್ಷರಗಳನ್ನು ಗುರುತಿಸುವುದು, ಹಾಗೂ ಅಕ್ಷರಗಳು ಮಾತನಾಡುವಾಗ ಹೊರಡುವ ಶಬ್ದ ಗಳ ಒಂದು ಅಂಶ ಎಂಬುದನ್ನು ತಿಳಿಯುವುದು. ಇದೇ ಹಂತದಲ್ಲಿಯೇ ಮಕ್ಕಳು ಪ್ರಾಸಬದ್ಧ ಪದಗಳ ಯೋಗ್ಯತೆಯನ್ನು ಮೆಚ್ಚುವ ಶಕ್ತಿ ಗಳಿಸಬೇಕು, ಹಾಗೂ ಮಾತನಾಡುವುದು ಸಹ ಲಯಬದ್ಧವೆಂಬುದನ್ನು ತಿಳಿಯಬೇಕು.

- ನಾಲ್ಕನೆಯ ಹಂತವೇ ಪದಗಳು ಮಾತನಾಡುವ ಶಬ್ಧಗಳಿಂದ ಹೊರಡುತ್ತವೆ ಎಂಬುದನ್ನು ಅರಿಯುವುದು.ಈ ಶಬ್ಧಗಳನ್ನು ಗುರುತಿಸಲಾಗದ ಮತ್ತು ಅವುಗಳನ್ನು ಹೊರಡಿಸಲಾಗದ ಸಂದರ್ಭದಲ್ಲಿ ಅದು ಓದುವುದಕ್ಕೆ ಭಾದೆಯನ್ನುಂಟುಮಾಡಬಹುದು.

## ಶಿಶುಗಳಿಗಾಗಿ ಪುಸ್ತಕಗಳು

1 ಮಗು ಜೊಲ್ಲು ಸುರಿಸಿದರೂ, ಕಚ್ಚಿದರೂ ಸಹ ಹಾಳಾಗದಂತಹ – ಗಟ್ಟಿ ಮುಟ್ಟೆನ, ದಪ್ಪ ರಟ್ಟಿನ, ಪದರಗಳನ್ನು ಜೋಡಿಸಿ ಮಾಡಿರುವಂತಹ ಹಾಳೆಗಳಿರುವ (laminated) ಪುಸ್ತಕಗಳು.

2 ದೊಡ್ಡದಾದ, ಹೊಳೆಯುವಂತಹ, ಸ್ಪಷ್ಟವಾದ ಚಿತ್ರಗಳಿರುವಂತಹ ಪುಸ್ತಕಗಳು.

3 ಚಿರಪರಿಚಿತವಾದಂತಹ ವ್ಯಕ್ತಿ/ವಸ್ತುಗಳ ಚಿತ್ರಗಳಿರುವಂತಹ ಪುಸ್ತಕಗಳು – ಅಂದರೆ, ಬೇರೇ ಮಕ್ಕಳ, ಮುದ್ದು ಪ್ರಾಣಿಗಳ ಅಥವಾ ಮನೆಯಲ್ಲಿ ಉಪಯೋಗಿಸುವಂತಹ ಸಾಮಾನುಗಳ ಚಿತ್ರಗಳಿ ರುವಂತಹ ಪುಸ್ತಕಗಳು.

4 ಅದರೊಂದಿಗೇ ಆಟವಾಡಬಹುದಾದಂತಹ ದಪ್ಪ ರಟ್ಟಿನ ಪುಸ್ತಕಗಳು.

## ಶಿಶುವಿಹಾರಕ್ಕೆ ಹೋಗುವ ಮಕ್ಕಳಿಗೆ?

1 ಮೊದಲಿಗೆ ಹೆಚ್ಚಿಗೆ ಚಿತ್ರಗಳು ಹಾಗೂ ಕಡಿಮೆ ಬರಹವಿರುವಂತಹ ಪುಸ್ತಕಗಳು ಸರಿಹೋಗುತ್ತದೆ. ಮಕ್ಕಳ ಬಗ್ಗೆ ಕತೆ ಇರುವ ಪುಸ್ತಕಗಳು ಹಾಗೂ ನಗು ಬರಿಸುವಂತಹ, ದೃಷ್ಟಾಂತಗಳಿರುವಂತಹ ಪದಗಳಿರುವ ಪುಸ್ತಕಗಳು (ಉದಾ–ಚುಕ್–ಬುಕ್ – ಚುಕ್–ಬುಕ್ ರೈಲುಗಾಡಿ).

2 ಪ್ರಾಸಬದ್ಧವಾಗಿರುವಂತಹ ಪದಗಳು ಹಾಗೂ ಕತೆ ಮಕ್ಕಳಿಗೆ ಬಹಳ ಆಕರ್ಷಕ.

3 ಆರಂಭದಲ್ಲಿ ಸುಲಭವಾಗಿ ಅರ್ಥವಾಗುವಂತಹ, ನೈಜಘಟನೆಗಳು ಇರುವಂತಹ, ಕ್ರಿಯೆ ಇಂದ ಕೂಡಿರುವಂತಹ ಕತೆಗಳಿರುವ ಪುಸ್ತಕಗಳಾಗಿರಬೇಕು.

4 ಮಗು ಬೆಳೆದಂತೆ, ಚಿತ್ರಗಳ ಜತೆಗೆ ಮಗುವಿನ ವಯಸ್ಸಿಗೆ ಮತ್ತು ಜಾಣ್ಮೆಗೆ ತಕ್ಕಂತಹ ಹಲವು ವಾಕ್ಯಗಳಿರುವ ಹಾಗೂ ಅದಕ್ಕಿಂತ ಸ್ವಲ್ಪ ಕಷ್ಟವಾದಂತಹ ಕೆಲವು ವಾಕ್ಯಗಳು ಇರುವಂತಹ ಪುಸ್ತಕಗಳನ್ನು ಆರಿಸಿ. ಇದು ಓದುವುದರಲ್ಲಿ ಮಗುವಿಗಿರುವ ಆಸಕ್ತಿ ಮುಂದುವರೆಯುವಂತೆ ಮಾಡುತ್ತದೆ. ಈ ಹಂತದಲ್ಲಿ ಪ್ರತಿಯೊಂದು ಪುಟದಲ್ಲೂ ದೊಡ್ಡಕ್ಷರದ ಸುಲಭವಾದ ಪಂಕ್ತಿಗಳು ಇರುವುದು ಒಳ್ಳೆಯದು.

5 ಶಿಶುವಿಹಾರದ ಅಂತಿಮ ವರ್ಷದಲ್ಲಿ (5+ವರ್ಷಗಳಾದಾಗ) ಕಾಲ್ಪನಿಕ, ಪ್ರಾಣಿಗಳ ಮತ್ತು ಯಕ್ಷಿಣಿ ಗಳನ್ನು (ಜಿಚುಡುಝ)ಕುರಿತಾದ ಕತೆಗಳನ್ನು ಸೇರಿಸಬಹುದು.

samyukta
CHILD DEVELOPMENT CONSULTANCY

## ಸಂಪಾದಕರಿಗೆ ಪತ್ರಗಳು

ನಮ್ಮ ಓದುಗರ ಪ್ರತಿಕ್ರಿಯೆಗಳಿಂದ ನಾವು ಬೆಳೆದು ಯಶಸ್ವಿಯಾಗಲು ಯೋಜಿಸಿದ್ದೇವೆ. ಈ ಮೇಲೆ ಕೊಟ್ಟಿರುವ ವಿಳಾಸಕ್ಕೆ ಪತ್ರ ಅಥವಾ ಈ–ಮೇಲ್ ಮೂಲಕ ನಿಸ್ಸಂಕೋಚವಾಗಿ ಬರೆಯಿರಿ. ತಮ್ಮ ಪ್ರತಿಕ್ರಿಯೆಗಳನ್ನು ಆದಷ್ಟು ಮಟ್ಟಿಗೆ ಪ್ರಕಟಿಸಲು ಪ್ರಯತ್ನಿಸುತ್ತೇವೆ.

ನಿಮ್ಮ ಪ್ರತಿಕ್ರಿಯೆಗಳನ್ನು **mahiti@samyuktacdc.com** ನಲ್ಲಿ ನಿರೀಕ್ಷಿಸಲಾಗುತ್ತಿದೆ.



## ಸಂಪನ್ಮೂಲ

### ಶಿಕ್ಷಕರಿಗೆ

1. www.earlyreadingskills.co.uk
2. www.preschooleducation.com

### ತಾಯಿ ತಂದೆಯರಿಗೆ

1. www.readingrockets.org
2. www.nncc.org

### ನಿಮ್ಮ ಮಕ್ಕಳಿಗಾಗಿ ಪುಸ್ತಕಗಳನ್ನು ಕೊಳ್ಳಲು

1. Scholastic books (www.scholastic-asia.com)
2. Pratham books (www.prathambooks.org) (ಪುಸ್ತಕಗಳು ಕನ್ನಡದಲ್ಲೂ ಸಿಗುತ್ತವೆ.)
3. Children's Book Trust (www.childrensbooktrust.com) (ಪುಸ್ತಕಗಳು ಕನ್ನಡದಲ್ಲೂ ಸಿಗುತ್ತವೆ)
4. Tulika Books (www.tulikabooks.com)
5. Lady Bird series (www.ladybird.co.uk)

(ಇದೇ ರೀತಿ ಕನ್ನಡದಲ್ಲೂ ಸಹ ಬಹಳಷ್ಟು ಪುಸ್ತಕಗಳು ದೊರೆಯುತ್ತವೆ. ಈ ಮೇಲಿನ ಎಲ್ಲಾ ಪ್ರಕಾಶಕರ ಪುಸ್ತಕಗಳು ಹೆಚ್ಚಿನ ಊರುಗಳಲ್ಲಿ ದೊಡ್ಡ ದೊಡ್ಡ ಪುಸ್ತಕದ ಅಂಗಡಿಗಳಲ್ಲಿ ದೊರೆಯುತ್ತವೆ.)

### ತಾಯಿ ತಂದೆಯರಿಗೆ ಸಂಪಾದಕರ ಆಯ್ಕೆ

**“What you need to know when your child is learning to read” by Sara Wilford, Scholastic Inc.**


Samyukta
CHILD DEVELOPMENT CONSULTANCY

**Samyukta Child Development Consultancy**

GF1, Jeevanadi Summit,4B Sri Rama Temple Street,
New Thippasandra,Bangalore-560075
**www.samyuktacdc.com**
**(+91) 98445 25045**